ಚಿಕ್ಕಮಂಗಳೂರು ಜಿಲ್ಲಾ ಡಿ.ಸಿ.ಸಿ. ಬ್ಯಾಂಕ್,

೭೩೨. ಶ್ರೀ ಐ. ಬಿ. ಶಂಕರ್ (ಚಿಕ್ಕ ಮಗಳೂರು).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರೀಯ ಬ್ಯಾಂಕು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಇ) ಬ್ಯಾಂಕಿನವರು ಸಂಘಗಳಿಗೆ ನೀಡಿದ ಸಾಲದ ಮೊತ್ತ ಎಷ್ಟು ?

ಈ) ಸಾಲದ ವಸೂಲಾತಿ ಸಮರ್ಪಕವಾಗಿಲ್ಲದಿರುವುದು ನಿಜವೇ, ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರೀಯ ಬ್ಯಾಂಕ್ ೧೯೮೪-೮೫ನೇ ಸಾಲಿನಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ೩೫೬.೫೨ ಲಕ್ಷ ರೂಪಾಯಿಗಳ ಸಾಲವನ್ನು ವಿತರಿಸಿ ಬರಬೇಕಾಗಿದ್ದ ಸಾಲದ ಶೇಕಡ ೫೧.೨೦ ರಷ್ಟು ವಸೂಲಾತಿ ನಡೆದಿದೆ. ಬ್ಯಾಂಕು ೧೯೮೪-೮೫ನೇ ಸಾಲಿನಲ್ಲಿ ೨೧.೯೮ ಲಕ್ಷ ರೂಪಾಯಿಗಳ ಲಾಭ ಗಳಿಸಿ ನಿವ್ವಳ ನಷ್ಟವನ್ನು ರೂ. ೨೬.೪೩ ಲಕ್ಷಗಳಿಂದ ರೂ. ೪.೪೫ ಲಕ್ಷಗಳಿಗೆ ಕಡಿಮೆ ಮಾಡಿದೆ. ಆದ್ದರಿಂದ ಬ್ಯಾಂಕಿಂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಹೇಳಲು ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ಯಾಂಕಿನವರು ೧೯೮೪-೮೫ನೇ ಸಾಲಿನಲ್ಲಿ ರೂ. ೩೫೬.೫೨ ಲಕ್ಷಗಳ ಸಾಲವನ್ನು ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ನೀಡಿದ್ದಾರೆ.

ಈ) ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನವರು ಸಾಲದ ಮಿತಿ ಮಂಜೂರು ಮಾಡಲು ಶೇ. ೪೦ ರಷ್ಟು ವಸೂಲಾತಿ ಮಾಡಬೇಕೆಂಬ ಷರತ್ತು ವಿಧಿಸಿದ್ದು ಬ್ಯಾಂಕು ೩೦-೬-೮೫ಕ್ಕೆ ತನಗೆ ಬರಬೇಕಾಗಿದ್ದ ಅಲ್ಪಾವಧಿ -- ಮಧ್ಯಮಾವಧಿ ಪರಿವರ್ತಿತ ಮಧ್ಯಮಾವಧಿ ಸಾಲಗಳಲ್ಲಿ ಶೇಕಡ ೫೧.೨೦ ರಷ್ಟು ವಸೂಲಾತಿ ಸಾಧಿಸಿ ರಾಷ್ಟ್ರೀಯ ಬ್ಯಾಂಕ್‌ನಿಂದ ಸಾಲದ ಮಿತಿ ಪಡೆಯಲು ಅರ್ಹತೆ ಗಳಿಸಿದ್ದಾರೆ. ಸುಸ್ತಿಯಾದ ಸಾಲಗಳ ವಸೂಲಾತಿಗೆ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಸಹಕಾರಿ ಕಾನೂನಿನ ಪ್ರಕಾರ ಕ್ರಮಗಳನ್ನು ಕೈಗೊಳ್ಳುತ್ತಿವೆ.

ವಿದ್ಯುತ್ ಸಂಪರ್ಕ ಕಲ್ಪಿಸುವುದರ ಬಗ್ಗೆ.

೭೫೦. ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ವಿದ್ಯುಚ್ಛಕ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿಯಲ್ಲಿ ಪಂಪುಸೆಟ್ಟುಗಳಿಗೆ, ಮನೆಗಳಿಗೆ, ಸಾರ್ವಜನಿಕ ರಸ್ತೆಗಳಿಗೆ, ವಿದ್ಯುತ್ ಸಂಪರ್ಕ ಕಲ್ಪಿಸುವುದರ ಬಗ್ಗೆ ಅನುಕ್ರಮವಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಹೆಚ್ಚಿನ ಅವಧಿಯಿಂದ ವಿಲೇವಾರಿ ಆಗದೇ ಇರುವ ಪಂಪುಸೆಟ್ಟುಗಳ ಬೇಡಿಕೆಗೆ ಬಂದ ಅರ್ಜಿಗಳೆಷ್ಟು ? ವಿವರ ನೀಡುವುದು

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕಛೇರಿಗೆ ೩೧-೧-೧೯೮೬ರ ವರೆಗೆ ವಿದ್ಯುತ್ ಸರಬರಾಜಿಗಾಗಿ ಬಂದ ಅರ್ಜಿಗಳ ಸಂಖ್ಯೆ.

೧)	ಪಂಪು ಸೆಟ್ಟುಗಳಿಗೆ	...	೫೬೭
೨)	ಮನೆಗಳಿಗೆ	...	೧೨೧೬
೩)	ಬೀದಿ ದೀಪಗಳಿಗೆ	...	೧೨

ಆ) ೧೯೮೩-೫೪ — ೨೧
೧೯೮೪-೮೫ — ೫೭
೧೯೮೫-೮೬ — ೨೩೮
(೩೧-೧-೮೬ ರವರೆಗೆ) ———
೩೧೬
———

ಬಂಟ್ವಾಳ ತಾಲ್ಲೂಕಿನ ಕೃಷಿ ಬಳಕೆಯ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದರ ಬಗ್ಗೆ.

೧೯೭. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).—ಮಾನ್ಯ ವಿದ್ಯುತ್‌ಚ್ಛಕ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಹಾಯಕ ಇಂಜೀನಿಯರ ಕಛೇರಿಗೆ ಕೃಷಿ ಬಳಕೆಯ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಂತೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಎಷ್ಟು ಜನ ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಗಿದೆ ?

ಇ) ಉಳಿಕೆ ಸಂಖ್ಯೆ ಎಷ್ಟು, ಹಾಗೂ ಇವುಗಳಿಗೆ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುತ್ತದೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನಲ್ಲಿ ಮಂಡಳಿಯು ಬಂಟ್ವಾಳ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಗಾಗಿ ಬಂದ ಅರ್ಜಿಗಳ ಸಂಖ್ಯೆ ೩೫೫.

ಆ) ೩೫೫ ಅರ್ಜಿದಾರರ ಪೈಕಿ ೯೭ ಅರ್ಜಿದಾರರಿಗೆ ೧೯೮೫-೮೬ ರಲ್ಲಿ ವಿದ್ಯುತ್ ಸರಬರಾಜು ಮಾಡಲಾಯಿತು.

ಇ) ೧೯೮೫-೮೬ನೇ ಸಾಲಿನಲ್ಲಿ ಬಂದ ಅರ್ಜಿಗಳ ಪೈಕಿ ಅದೇ ವರ್ಷ ವಿದ್ಯುತ್ ಸರಬರಾಜಾಗದೆ ಉಳಿದ ಅರ್ಜಿಗಳ ಸಂಖ್ಯೆ ೨೯೮. ಆ ಪೈಕಿ ಪ್ರಸಕ್ತ ಸಾಲಿನಲ್ಲಿ ೧೯೮೬ನೇ ಡಿಸೆಂಬರ್‌ರವರೆಗೆ ೭೨ ಅರ್ಜಿದಾರರಿಗೆ ವಿದ್ಯುತ್ ಸರಬರಾಜಾಗಿದೆ. ಉಳಿದ ೨೨೬ ಪಂಪ್‌ಸೆಟ್‌ಗಳ ಕೆಲಸ ಮುಂದುವರೆಯುತ್ತಿದೆ.

ರಾಜ್ಯದಲ್ಲಿ ಹೆಂಡದ ಉತ್ಪಾದನೆ ಬಗ್ಗೆ.

೩೬೬. ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).—ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೆಂಡದ ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ವೆಚ್ಚವೆಷ್ಟು ?

ಆ) ರಾಜ್ಯದಲ್ಲಿ ಹೆಂಡದ ಉತ್ಪಾದನೆಯ ಪ್ರಮಾಣವೆಷ್ಟು ?